ರಾಜ್ಯದಲ್ಲಿ ದೇವಸ್ಥಾನ ಆಡಳಿತ ಮತ್ತು ಅಭಿವೃದ್ಧಿ.

2992(3751)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದೇವಸ್ಥಾನದ ಆಡಳಿತ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ''ಏಕರೂಪ ಕಾಯ್ದೆ''ಯನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದಯೇ? (ಏವರ ನೀಡುವುದು)?

ಆ) ಹಾಗಿದ್ದಲ್ಲಿ ಇದರ ಏವರಗಳೇನು?

ಶ್ರೀ ಬಾಬುರಾವ್ ಬಸವಣಿಪ್ಪ ಚಿಂಚನಸೂರ್ (ಮುಜರಾಯಿ ರಾಜ್ಯ ಸಚಿವರು):

ಅ) ಮತ್ತು ಆ) ಹೌದು, ಕರ್ನಾಟಕ ರಾಜ್ಯದಲ್ಲಿನ ಧಾರ್ಮಿಕ ದತ್ತಿ ಸಂಸ್ಥೆಗಳ ಆಡಳಿತವನ್ನು ಪ್ರಸುತ 5 ಏಭಿನ್ನ ಕಾಯ್ದೆಗಳನ್ವಯ ನಿರ್ವಹಿಸಲಾಗುತ್ತಿದೆ. ಸದರಿ ಕಾಯ್ದೆಗಳ ಬದಲಿಗೆ ಏಕರೂಪ ಮಸೂದೆಯನ್ನು ಜಾರಿಗೆ ತರಲು ''ಧರ್ಮದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ವಿಧೇಯಕ 1997'' ಎಂಬ ಮಸೂದೆಯನ್ನು ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಿದ್ದು ಅನಂತರ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಎರಡೂ ಸದನಗಳು ಅಂಗೀಕರಿಸಿ ಸನ್ಮಾನ್ಯ ರಾಜ್ಯಪಾಲರ ಅನುಮೋದನೆಯೊಂದಿಗೆ ಸನ್ಮಾನ್ಯ ರಾಷ್ಟ್ರಪತಿಗಳ ಅನುಮೋದನೆಗಾಗಿ ಕಳುಹಿಸಲಾಗಿದೆ.

ಮಂಡ್ಯ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸೌಲಭ್ಯ.

2995(3757)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

1. ಮಂಡ್ಯ ನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಸೌಲಭ್ಯ ಇಲ್ಲದೇ ಇರುವುದನ್ನು ಸರ್ಕಾರವು ಗಮನಿಸಿದೆಯೇ?

2. ಹಾಗಿದ್ದಲ್ಲಿ ಒಳಚರಂಡಿ ವ್ಯವಸ್ಥೆಯ ಸೌಲಭ್ಯ ಒದಗಿಸಲು ಸರ್ಕಾರವು ಈವರೆಗೆ

ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು):

1. ಮಂಡ್ಯ ನಗರದ ಕೆಲವು ಭಾಗಗಳು ಹಾಗೂ ಹೊಸ ಬಡಾವಣೆಗಳಲ್ಲಿ ಒಳಚರಂಡಿ ಇರುವುದಿಲ್ಲ.

2. ಮಂಡ್ಯ ನಗರದಲ್ಲಿ ಒಳಚರಂಡಿ ಇಲ್ಲದ ಪ್ರದೇಶಗಳಿಗೆ ಹಾಗೂ ಹೊಸ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಅಂದಾಜು ಪಟ್ಟಿಯನ್ನು ರೂ.17.00 ಕೋಟಿಗಳಿಗೆ ತಯಾರಿಸಿದ್ದು ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಮುಜರಾಯಿ ಇಲಾಖೆಯಿಂದ ಬಿಡುಗಡೆಯಾದ ಹಣ.

2996(2362)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ(ಸೇಡಂ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-01ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಮುಜರಾಯಿ ಇಲಾಖೆಗೆ ನಿಗಧಿ ಪಡಿಸಿರುವ ಹಣ ಎಷ್ಟು?

ಆ) ಈ ಹಣ ಯಾವ ಯಾವ ಜಿಲ್ಲೆಗೆ ಮಂಜೂರಿಯಾಗಿ ಬಿಡುಗಡೆ ಮಾಡಲಾಗಿದೆ?

ಇ) ಅದರಲ್ಲಿ ಗುಲ್ಬರ್ಗಾ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ? ಮತ್ತು

ಈ) ಗುಲ್ಬರ್ಗಾ ಜಿಲ್ಲೆಯಲ್ಲಿ ಮಂಜೂರಿಯಾಗಿ ಆಯಾ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು? (ತಾಲ್ಲೂಕುವಾರು: ದೇವಸ್ಥಾನವಾರು ವಿವರ ನೀಡುವುದು)

ಶ್ರೀ ಬಾಬುರಾವ್ ಬಸವಣ್ಣಿಪ್ಪ ಚಿಂಚಸನೂರು (ಮುಜರಾಯಿ ರಾಜ್ಯ ಸಚಿವರು)

ಅ) ಸರ್ಕಾರವು 2000-01ನೇ ಸಾಲಿನಲ್ಲಿ ಮುಜರಾಯಿ ದೇವಾಲಯಗಳ ದುರಸ್ತಿ : ಜೀರ್ಣೋದ್ಧಾರ ಮತ್ತು ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಈ ಕೆಳಕಂಡಂತೆ ನಿಗಧಿ